**<u>ದಿನಾಂಕಃ 20.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಟಿ.ಎಂ.ಎಸ್ ವಕೀಲರಿಂದಃ</u>**

ನಾನು ಪದವಿಯವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ಮತ್ತು ಆರೋಪಿತರು ಒಂದೇ ಗ್ರಾಮದವರು ಎಂದರೆ ಸರಿ. ಚಾಸಾ-2 ರಿಂದ 6 ರವರು ನಮ್ಮ ಗ್ರಾಮದವರು ಎಂದರೆ ಸರಿ. ಸದರಿ ಚಾಸಾ-2 ರಿಂದ 6 ರವರು ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಚಂದ್ರದರ ಎಂಬುವರು ನನ್ನ ಸಹೋದರ. ನನ್ನ ಸಹೋದರ ಚಂದ್ರದರರವರು ಈ ಹಿಂದೆ ಆರೋಪಿಗಳ ತಂದೆಯ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಕ್ರಿಮಿನಲ್ ಪ್ರಕರಣದ ನಂತರ ನಮ್ಮ ಮತ್ತು ಆರೋಪಿತರ ನಡುವೆ ವೈಮನಸ್ಸು ಮತ್ತು ದ್ವೇಷ ಇದೆ ಎಂದರೆ ಸರಿ. ಆರೋಪಿಗಳ ತಂದೆಯಾದ 3 ನೇ ಆರೋಪಿಯು ಈ ಪ್ರಕರಣ ದಾಖಲಾದ ನಂತರ ಮರಣ ಹೊಂದಿದ್ದಾರೆ ಎಂದರೆ ಸರಿ.

ನಾನು ಹೇಳಿದ ಗಲಾಟೆಯು ಕುಮಾರ ಬಿನ್ ಬಸವಣ್ಣರವರ ಮನೆಯ ಮುಂದೆ ಇರುವ ರಸ್ತೆಯಲ್ಲಿ ಆಗಿರುತ್ತದೆ. ನಾನು ಹೇಳಿದ ಗಲಾಟೆಯಾದ ಸಮಯವು ಸಂಜೆಯಾದ್ದರಿಂದ ಹಳ್ಳಿಯಲ್ಲಿ ಹೆಚ್ಚಿನ ಜನರು ರಸ್ತೆಯಲ್ಲಿ ಸಂಚರಿಸುತ್ತಾರೆ ಎಂದರೆ ಸರಿ. ನಮ್ಮ ಮನೆಯಿಂದ ನಾನು ಹೇಳಿದ ಗಲಾಟೆಯಾದ ಸ್ಥಳಕ್ಕೆ ಸುಮಾರು 100 ಮೀ ದೂರ ಇರುತ್ತದೆ. ನಾನು ಹೇಳಿದ ಗಲಾಟೆಯಾದ ಸಮಯದಲ್ಲಿ ಆರೋಪಿತರು ನನ್ನ ಹಿಂದಿನಿಂದ ಉತ್ತರದ ಕಡೆಯಿಂದ ಬಂದು ಗಲಾಟೆ ಮಾಡಿರುತ್ತಾರೆ. ನಾನು ಹೇಳಿದ ಗಲಾಟೆಯಾದ ಸ್ಥಳದಿಂದ ಆರೋಪಿತರ ಮನೆಯು ಸುಮಾರು 80 ಮೀ ದೂರದಲ್ಲಿ ಇರುತ್ತದೆ. ಆರೋಪಿತರು ನಾನು ಹೇಳಿದ ಗಲಾಟೆಯಾದ ಸ್ಥಳಕ್ಕೆ ನಡೆದುಕೊಂಡು ಬಂದಿರುತ್ತಾರೆ. ನಾನು ಹೇಳಿದ ಗಲಾಟೆಯಾದ ದಿನಾಂಕದಂದು 1 ನೇ ಆರೋಪಿಯು ಸದರಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 1 ನೇ ಆರೋಪಿಯು ನಾನು ಹೇಳಿದ ಗಲಾಟೆಯಾದ ಸ್ಥಳಕ್ಕೆ ಬಂದಿಲ್ಲ, ಯಾರು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ 1 ನೇ ಆರೋಪಿಯು ನನಗೆ ಯಾವುದೇ ರೀತಿಯ ಅವಾಚ್ಯವಾಗಿ ಬೈದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಆರೋಪಿಯು ನನ್ನನ್ನು ತಬ್ಬಿ ಹಿಡಿದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ

ಮೇಲೆ ಇರುವ ಹಳೆ ದ್ವೇಷದಿಂದ ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಸಿ.ಎಂ ವಕೀಲರಿಂದಃ**

ನಾನು ಮತ್ತು 2 ನೇ ಆರೋಪಿಯು ಒಂದೇ ಗ್ರಾಮದವರು ಮತ್ತು ಸ್ನೇಹಿತರು ಎಂದರೆ ಸರಿ. ನಾನು ಹೇಳಿದ್ದ ಗಲಾಟೆಯಾದ ನಂತರ ನನ್ನ ಮತ್ತು 2 ನೇ ಆರೋಪಿಯ ನಡುವೆ ಯಾವುದೇ ಮಾತುಕತೆ ಇರುವುದಿಲ್ಲ. 2 ನೇ ಆರೋಪಿಯು ನಮ್ಮ ಊರಿನಲ್ಲಿ ವಾಸ ಇಲ್ಲ ಎಂದರೆ ಸಾಕ್ಷಿದಾರರು ದಿನಾಂಕ 06.11.2018 ರಂದು 2 ನೇ ಆರೋಪಿಯು ಹಬ್ಬಕ್ಕೆ ಊರಿಗೆ ಬಂದಿದ್ದನು ಎಂದು ನುಡಿಯುತ್ತಾರೆ. 2 ನೇ ಆರೋಪಿಯು ಮಠ-ಮಾನ್ಯಗಳಲ್ಲಿ ಪೂಜೆ ಮಾಡಿಕೊಂಡು ತಮಿಳುನಾಡಿನಲ್ಲಿ ವಾಸಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳಿದ ದಿನಾಂಕದಂದು 2 ನೇ ಆರೋಪಿಯು ಸ್ಥಳದಲ್ಲಿ ಇರದಿದ್ದರೂ ಸಹ ನಾನು ಹಳೆಯ ದ್ವೇಷದಿಂದ 2 ನೇ ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 2 ನೇ ಆರೋಪಿಯು ನಾನು ಹೇಳಿದ ಗಲಾಟೆಯಾದ ಸ್ಥಳಕ್ಕೆ ಬಂದಿಲ್ಲ, ಯಾರು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ 2 ನೇ ಆರೋಪಿಯು ನನಗೆ ಯಾವುದೇ ರೀತಿಯ ಅವಾಚ್ಯವಾಗಿ ಬೈದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಆರೋಪಿಯು ನನಗೆ ಚಾಕುವಿನಿಂದ ಚುಚ್ಚಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಇರುವ ಹಳೆ ದ್ವೇಷದಿಂದ ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ